# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 152 |
| ಸದಸ್ಯರ ಹೆಸರು | ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 10/12/2018 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ನಡೆಯುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳೆಷ್ಟು; ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು;</td><td>ಅ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ 166 ಹಿಂದುಳಿದ ವರ್ಗಗಳ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ<br>ಆ) ಪ್ರಸ್ತುತ ಈ ವಸತಿ ಶಾಲೆಗಳಲ್ಲಿ ಒಟ್ಟು 3481 ಖಾಯಂ ಸಿಬ್ಬಂದಿಗಳು, ಹೊರಸಂಪನ್ಮೂಲದ ಸಿಬ್ಬಂದಿಗಳು, ಮತ್ತು ಅತಿಥಿ ಶಿಕ್ಷಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ.</td></tr>
<tr><td>ಆ)</td><td>ಅಗತ್ಯ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಸೃಷ್ಟಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು; ಹುದ್ದೆವಾರು ವಿವರ ನೀಡುವುದು) ಆ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;</td><td>ಅ) 166 ಹಿಂದುಳಿದ ವರ್ಗಗಳ ವಸತಿ ಶಾಲೆ/ ಕಾಲೇಜುಗಳಿಗೆ ಮಂಜೂರಾದ ಸೃಷ್ಟಿಸಿದ , ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ವಿವರಗಳು ಈ ಕೆಳಕಂಡಂತಿದೆ.<br><table><tr><th>ಕ್ರ.ಸಂ.</th><th>ವಿವರ</th><th>ಸಂಖ್ಯೆ</th></tr><tr><td>1.</td><td>ಸೃಷ್ಟಿಸಿದ ಹುದ್ದೆಗಳು</td><td>3961</td></tr><tr><td>2.</td><td>ಖಾಯಂ ಸಿಬ್ಬಂದಿಗಳು</td><td>1118</td></tr><tr><td>3.</td><td>ಹೊರಸಂಪನ್ಮೂಲದ ಸಿಬ್ಬಂದಿಗಳು</td><td>2009</td></tr><tr><td>4.</td><td>ಅತಿಥಿ ಶಿಕ್ಷಕರುಗಳು</td><td>354</td></tr><tr><td></td><td>ಒಟ್ಟು</td><td>3481</td></tr></table>ಆ) ಹುದ್ದೆವಾರು ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.</td></tr>
<tr><td>ಇ)</td><td>ಕ್ರೈಸ್ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ವಸತಿ ಶಾಲೆಗಳ ಶಿಕ್ಷಕರಿಗೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ತತ್ಸಮಾನ ವೃಂದದ ಶಿಕ್ಷಕರಿಗೆ ನೀಡುತ್ತಿರುವ ವೇತನ, ವೇತನ ಬಡ್ತಿ, ವಿಶೇಷ ಭತ್ಯೆ, ಸೇವಾ</td><td>ಅ) ಕ್ರೈಸ್ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ವಸತಿ ಶಾಲೆಗಳ ಪ್ರಾಂಶುಪಾಲರು/ಶಿಕ್ಷಕರುಗಳಿಗೆ ಶಿಕ್ಷಣ ಇಲಾಖೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರುಗಳಿಗೆ ಅಳವಡಿಸಿಕೊಂಡ ವೇತನ ಶ್ರೇಣಿಯನ್ನು ವಿಸ್ತರಿಸಿದ್ದು, ವಿವರಗಳು ಈ ಕೆಳಕಂಡಂತಿದೆ.</td></tr>
</table>

<table>
<tr>
<td></td>
<td>ಸೌಲಭ್ಯಗಳ ತುಲನಾತ್ಮಕ ವಿವರ ನೀಡುವುದು;</td>
<td>
<table>
<tr><td>1</td><td>ವಸತಿ ಶಾಲೆಯ ಪ್ರಾಂಶುಪಾಲರು (ಶಿಕ್ಷಣ ಇಲಾಖೆ ವೇತನ ಶ್ರೇಣಿ)</td><td>52650-97100</td></tr>
<tr><td>2</td><td>ಕನ್ನಡ, ಆಂಗ್ಲ, ಹಿಂದಿ, ವಿಜ್ಞಾನ, ಗಣಿತ, ಸಮಾಜ ವಿಜ್ಞಾನ, ಸಂಗೀತ ಶಿಕ್ಷಕರು, ಚಿತ್ರಕಲಾ ಶಿಕ್ಷಕರು, ಕಂಪ್ಯೂಟರ್ ಶಿಕ್ಷಕರು, ದೈಹಿಕ ಶಿಕ್ಷಕರು, (ಶಿಕ್ಷಣ ಇಲಾಖೆ ವೇತನ ಶ್ರೇಣಿ)</td><td>33450-62600</td></tr>
</table>
ಅ) ಮೇಲೆ ಹೇಳಲಾದ ವೇತನ ಶ್ರೇಣಿಯಲ್ಲಿ ನಿಗದಿಪಡಿಸಿದ ವೇತನ ಬಡ್ತಿಯನ್ನು ಮಂಜೂರು ಮಾಡಲಾಗುತ್ತಿದೆ.<br>
ಆ) ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರುಗಳಿಗೆ ನೀಡಲಾಗುತ್ತಿರುವ ವೈದ್ಯಕೀಯ ವೆಚ್ಚ, ಗಳಿಕೆ ನಗದೀಕರಣ, ಮಾತೃತ್ವ ಹಾಗೂ ಪಿತೃತ್ವ ರಜೆಗಳನ್ನು ಮಂಜೂರು ಮಾಡಲಾಗುತ್ತಿದೆ.<br>
ಇ) ಸಂಘದ ಖಾಯಂ ನೌಕರರುಗಳಿಗೆ ಜೀವ ವಿಮಾ ಸಂಸ್ಥೆಯ ಮುಖಾಂತರ ಸಮೂಹ ವಿಮೆ ಜಾರಿಗೊಳಿಸಿದೆ.
</td>
</tr>
<tr>
<td>ಈ)</td>
<td>ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರಿಗೆ ಹೋಲಿಸಿದಾಗ ಕ್ರೈಸ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ತಾರತಮ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ತಾರತಮ್ಯ ಸರಿಪಡಿಸಲು ಸರ್ಕಾರ ಕೈಗೊಂಡ ಹಾಗೂ ಕೈಗೊಳ್ಳಲು ಇಚ್ಛಿಸಿರುವ ಕ್ರಮಗಳೇನು?</td>
<td>ಅ) ಕುಮಾರ್ ನಾಯಕ್ ವರದಿಯ ಆಧಾರದ ಮೇಲೆ ಶಿಕ್ಷಣ ಇಲಾಖೆಯ ಶಿಕ್ಷಕರುಗಳಿಗೆ ಮಂಜೂರಾದ ವಿಶೇಷ ವೇತನ ಬಡ್ತಿಯನ್ನು ಆರನೇ ವೇತನ ಆಯೋಗದ ವೇತನ ಶ್ರೇಣಿಯಲ್ಲಿ ವಿಲೀನಗೊಂಡಿಸಿರುವುದರಿಂದ ಸಂಘದ ಶಿಕ್ಷಕರುಗಳಿಗೆ ವಿಸ್ತರಿಸುವುದಿಲ್ಲ.<br>
ಆ) ಸಂಘದ ಖಾಯಂ ಶಿಕ್ಷಕರುಗಳಿಗೆ ಸರ್ಕಾರಿ ನೌಕರರುಗಳಿಗೆ ವಿಸ್ತರಿಸಿದ ಜ್ಯೋತಿ ಸಂಜೀವಿನಿ, ನಿವೃತ್ತಿ ಮತ್ತು ಮರಣ ಉಪದಾನ, ಕರ್ನಾಟಕ ಜೀವ ವಿಮೆ ಮತ್ತು ಸಮೂಹ ವಿಮೆಗಳನ್ನು ವಿಸ್ತರಿಸುವುದಿಲ್ಲ.</td>
</tr>
</table>

ಸಂಖ್ಯೆ: ಹಿಂವಕ 567 ಬಿಇಟಿ 2018

( ಸಿ.ಪುಟ್ಟರಂಗಶೆಟ್ಟಿ )
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು